# ಹರಿಕಥಾಮೃತಸಾರ - ೦೯

## ಉದಾತ್ತಾನುದಾತ್ತ ಸಂಧಿ

ಹರಿಕಥಾಮೃತಸಾರ ಗುರುಗಳ | ಕರುಣದಿಂದಾಪನಿತು ಪೇಳುವೆ |
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ||

ಹರಿಯು ಪಂಚಾಶದ್ವರಣ ಸು|ಸ್ವರವುದಾತ್ತನುದಾತ್ತ ಪ್ರಚಯ |
ಸ್ವರಿತ ಸಂಧಿ ವಿಸರ್ಗ ಬಿಂದುಗಳೊಳಗೆ ತದ್ವಾಚ್ಯ ||
ಇರುವ ತತ್ತನ್ನಾಮರೂಪಗ|ಳರಿತುಪಾಸನಗೈವರೊಳೆಯೊಳು |
ಸುರರೆ ಸರಿ ನರರಲ್ಲ ಅವರಾಡುವುದೇ ವೇದಾರ್ಥ || ||೦೯-೦೧||

ಈಶನಲಿ ವಿಜ್ಞಾನ ಭಗವ|ದ್ದಾಸರಲಿ ಸದ್ಭಕ್ತಿ ವಿಷಯನಿ |
ರಾಶಿ ಮಿಥ್ಯಾವಾದಿಯಲಿ ಪ್ರದ್ವೇಷ ನಿತ್ಯದಲಿ ||
ಈ ಸಮಸ್ತ ಪ್ರಾಣಿಗಳಲಿ ರ|ಮೇಶನಿಹನೆಂದರಿದು ಅವರಭಿ |
ಲಾಷೆಗಳ ಪೂರಯಿಸುವುದೆ ಮಹಯಜ್ಞ ಹರಿಪೂಜೆ || ||೦೯-೦೨||

ತ್ರಿದಶ ಏಕಾತ್ಮಕನೆನಿಸಿ ಭೂ | ಉದಕ ಶಿಖಿಯೊಳು ಹತ್ತು ಕರಣದಿ |
ಅಧಿಪರೆನಿಸುವ ಪ್ರಾಣಮುಖ್ಯಾದಿತ್ಯರೊಳು ನೆಲಸಿ ||
ವಿದಿತನಾಗಿದ್ದನವರತ ನಿರ|ವಧಿಕಮಹಿಮನು ಸಕಲ ವಿಷಯವ |
ನಿಧನನಾಮಕ ಸಂಕರುಷಣಾಹ್ವಯನು ಸ್ವೀಕರಿಪ || ||೦೯-೦೩||

ದಹಿಕ ದೈಶಿಕ ಕಾಲಿಕತ್ರಯ | ಗಹನ ಕರ್ಮಗಳುಂಟು ಇದರೊಳು |
ವಿಹಿತ ಕರ್ಮಗಳರಿತು ನಿಷ್ಕಾಮಕನು ನೀನಾಗಿ ||
ಬೃಹತಿನಾಮಕ ಭಾರತೀಶನ | ಮಹಿತರೂಪವ ನೆನೆದು ಮನದಲಿ |
ಅಹರಹರ್ಭಗವಂತಗರ್ಪಿಸು ಪರಮ ಭಕುತಿಯಲಿ || ||೦೯-೦೪||

ಮೂರು ವಿಧ ಕರ್ಮಗಳೊಳಗೆ ಕಂ|ಸಾರಿ ಭಾರ್ಗವ ಹಯವದನ ಸಂ |
ಪ್ರೇರಕನು ತಾನಾಗಿ ನವರೂಪಗಳನೇ ಧರಿಸಿ ||
ಸೂರಿ ಮಾನವ ದಾನವರೊಳು ವಿ|ಕಾರಶೂನ್ಯನು ಮಾಡಿ ಮಾಡಿಸಿ |
ಸಾರಭೋಕ್ತನು ಸ್ವೀಕರಿಸಿ ಕೊಡುತಿಪ್ಪ ಜೀವರಿಗೆ || ||೦೯-೦೫||

ಅನಳ ಪಕ್ವವ ಗೈಸಿದನ್ನವ | ಅನಳದೊಳು ಹೋಮಿಸುವ ತೆರದಂ |
ತನಿಮಿಷೇಶನು ಮಾಡಿ ಮಾಡಿಸಿದಖಿಳ ಕರ್ಮಗಳ ||
ಮನವಚನಾಯದಲಿ ತಿಳಿದನು|ದಿನದಿ ಕೊಡು ಶಂಕಿಸದೆ ವೃಜಿನಾ |
ರ್ದನ ಸದಾ ಕೈಕೊಂಡು ಸಂತಯಿಸುವನು ತನ್ನವರ || ||೦೯-೦೬||

ಕುದುರೆ ಬಾಲದ ಕೊನೆಯ ಕೂದಲ | ತುದಿ ವಿಭಾಗವ ಮಾಡಿ ಶತವಿಧ |
ವದರೊಳೊಂದನು ನೂರುಭಾಗವ ಮಾಡಲಿಂತಿಹುದೊ ||
ವಿಧಿಭವಾದಿ ಸಮಸ್ತದಿವಿಜರ | ಮೊದಲುಮಾಡಿ ತೃಣಾಂತಜೀವರೋ |
ಳಧಿಕ ನ್ಯೂನತೆಯಿಲ್ಲವೆಂದಿಗು ಜೀವ ಪರಮಾಣು || ||೦೯-೦೭||

ಜೀವನುಂಗುಷ್ಠಾಗ್ರಮೂರುತಿ | ಜೀವನಂಗುಟಮಾತ್ರ ಮೂರುತಿ |
ಜೀವನ ಪ್ರಾದೇಶ ಜೀವಾಕಾರ ಮೂರ್ತಿಗಳು ||
ಏವಮಾದಿ ಅನಂತ ರೂಪದಿ | ಯಾವದವಯವಗಳೊಳು ವ್ಯಾಪಿಸಿ |
ಕಾವ ಕರುಣಾಳುಗಳ ದೇವನು ಈ ಜಗತ್ರಯವ || ||೦೯-೦೮||

ಬಿಂಬ ಜೀವಾಂಗುಷ್ಠಮಾತ್ರದಿ|ಇಮ್ಮುಗೊಂಡಿಹ ಸರ್ವರೊಳು ಸೂ |
ಕ್ಷ್ಮಾಂಬರದಿ ಹೃತ್ಕಮಲಮಧ್ಯನಿವಾಸಿಯೆಂದೆನಿಸಿ ||
ಎಂಬರೀತಗೆ ಕೋವಿದರು ವಿಶ್ವಂಭರಾತ್ಮಕ ಪ್ರಾಜ್ಞ ಭಕ್ತಕು |
ಟುಂಬಿ ಸಂತೈಸುವನು ಈ ಪರಿ ಬಲ್ಲ ಭಜಕರನು || ||೦೯-೦೯||

ಪುರುಷನಾಮಕ ಸರ್ವಜೀವರೊಳಿರುವ ದೇಹಾಕಾರ ರೂಪದಿ |
ಕರಣನಿಯಾಮಕ ಹೃಷೀಕಪನಿಂದ್ರಿಯಂಗಳಲಿ ||
ತುರಿಯನಾಮಕ ವಿಶ್ವ ತಾ ಹನ್ನೆರಡು ಬೆರಳುಳಿದುತ್ತಮಾಂಗದಿ |
ಎರಡಧಿಕ ಎಪ್ಪತ್ತುಸಾವಿರ ನಾಡಿಯೋಳಗಿಪ್ಪ || ||೦೯-೧೦||

ವ್ಯಾಪಕನು ತಾನಾಗಿ ಜೀವ ಸ್ವರೂಪದೇಹದ ಒಳಹೊರಗೆ ನಿ |
ರ್ಲೇಪನಾಗಿಹ ಜೀವಕೃತ ಕರ್ಮಗಳನಾಚರಿಸಿ ||
ಶ್ರೀ ಪಯೋಜಭವೇರರಿಂದ ಪ್ರದೀಪವರ್ಣ ಸ್ವಮೂರ್ತಿ ಮಧ್ಯಗ |
ತಾ ಪೊಳೆವ ವಿಶ್ವಾದಿರೂಪದಿ ಸೇವೆ ಕೈಕೊಳುತ || ||೦೯-೧೧||

ಗರುಡ ಶೇಷ ಭವಾದಿ ನಾಮವ | ಧರಿಸಿ ಪವನ ಸ್ವರೂಪದೇಹದಿ |
ಕರಣನೀಯಾಮಕನು ತಾನಾಗಿಪ್ಪ ಹರಿಯಂತೆ ||
ಸರಸಿಜಾಸನ ವಾಣಿ ಭಾರತಿ | ಭರತನಿಂದೊಡಗೂಡಿ ಲಿಂಗದಿ |
ಇರುತಿಹರು ಮಿಶ್ರಾದಿತೀಯರಿಗಿಲ್ಲವಾ ಸ್ಥಾನ || ||೦೯-೧೨||

ಜೀವನೊ ತುಷದಂತೆ ಲಿಂಗವು | ಸಾವಕಾಶದಿ ಪೊಂದಿ ಸುತ್ತಲು |
ಪ್ರಾವರಣ ರೂಪದಲಿ ಇಪ್ಪುದು ಭಗವದಿಚ್ಛೆಯಲಿ ||
ಕೇವಲ ಜಡಪ್ರಕೃತಿಯಿದಕಧಿ | ದೇವತೆಯು ಮಹಲಕುಮಿಯೆನಿಪಳು |
ಆ ವಿರಜೆಯ ಸ್ನಾನಪರಿಯಂತರದಿ ಹತ್ತಿಹುದು || ||೦೯-೧೩||

ಆರಧಿಕ ದಶಕಳೆಗಳುಳ್ಳ ಶರೀರವನಿರುದ್ಧಗಳ ಮಧ್ಯದಿ ।
ಸೇರಿ ಇಪ್ಪವು ಜೀವ ಪರಮಾಟ್ಮಾದಿಕದ್ವಯವು ॥
ಬಾರದುಂದದಿ ದಾನವರನತಿದೂರಗೈಸುವ ಶ್ರೀಜನಾರ್ದನ ।
ಮೂರುಗುಣದೊಳಗಿಪ್ಪನೆಂದಿಗು ತ್ರಿವೃತುವೆಂದೆನಿಸಿ ॥ ॥೦೯-೧೪॥

ರುದ್ರ ಮೊದಲಾದಮರರಿಗೀ ಅನಿರುದ್ಧ ದೇಹವೆ ಮನೆಯೆನಿಸುವುದು ।
ಇದ್ದು ಕೆಲಸವ ಮಾಡರಲ್ಲಿಂದಿತ್ತ ಸ್ಥೂಲದಲಿ ॥
ಕ್ರುದ್ಧರುಳ ದಿವಿಜರು ಪರಸ್ಪರಸ್ಪರ್ಧೆಯಿಂದಲಿ ದ್ವಂದ್ವಕರ್ಮ ಸ ।
ಮೃದ್ಧಿಗಳನಾಚರಿಸುವರು ಪ್ರಾಣೇಶನಾಜ್ಞೆಯಲಿ ॥ ॥೦೯-೧೫॥

ಮಹಿಯೊಳಗೆ ಸುಕ್ಷೇತ್ರತೀರ್ಥದಿತುಹಿನ ವರುಷ ವಸಂತಕಾಲದಿ ।
ದಹಿಕ ದೈಹಿಕ ಕಾಲಿಕತ್ರಯ ಧರ್ಮಕರ್ಮಗಳ ॥
ದ್ರುಹಿಣ ಮೊದಲಾದಮರರೆಲ್ಲರು । ವಹಿಸಿ ಗುಣಗಳನನುಸರಿಸಿ ಸ ।
ನ್ನಿಹಿತರಾಗಿದ್ದೆಲ್ಲರೊಳು ಮಾಡುವರು ವ್ಯಾಪಾರ ॥ ॥೦೯-೧೬॥

ಕೇಶ ಸಾಸಿರವಿಧ ವಿಭಾಗವ । ಗೈಸಲೆನಿತನಿತಿಹ ಸುಷುಮ್ನವು ।
ಆ ಶಿರಾಂತದಿ ವ್ಯಾಪಿಸಿಹುದೀ ದೇಹಮಧ್ಯದಲಿ ।
ಆ ಸುಷುಮ್ನಕೆ ವಜ್ರಕಾರ್ಯ ಪ್ರಕಾಶಿನೀ ವೈದ್ಯುತಿಗಳಿಹವು ಪ್ರ ।
ದೇಶದಲಿ ಪಶ್ಚಿಮಕೆ ಉತ್ತರ ಪೂರ್ವ ದಕ್ಷಿಣಕೀ ॥ ॥೦೯-೧೭॥

ಆ ನಳಿನಭವ ನಾಡಿಯೊಳಗೆ ತ್ರಿಕೋಣ ಚಕ್ರವು ಇಪ್ಪುದಲ್ಲಿ ಕೃ ।
ಶಾನುಮಂಡಲಮಧ್ಯಗನು ಸಂಕರುಷಣಾಹ್ವಯನು ॥
ಹೀನ ಪಾಪಾತ್ಮಕ ಪುರುಷನ ದಹಾನಗೈಸುತ ದಿನದಿನದಿ ವಿ ।
ಜ್ಞಾನಮಯ ಶ್ರೀ ವಾಸುದೇವನ ಐದಿಸುವ ಕರುಣಿ ॥ ॥೦೯-೧೮॥

ಮಧ್ಯನಾಡಿಯ ಮಧ್ಯದಲಿ ಹೃತ್ಪದ್ಮಮೂಲದಿ ಮೂಲಪತಿ ಪದ ।
ಪದ್ಮಮೂಲದಲಿಪ್ಪ ಪವನನ ಪಾದಮೂಲದಲಿ ॥
ಪೊಂದಿಕೊಂಡಿಹ ಜೀವಲಿಂಗನಿರುದ್ಧ ದೇಹವಿಶಿಷ್ಟನಾಗಿ ಕ ।
ಪರ್ದಿ ಮೊದಲಾದಮರರೆಲ್ಲರು ಕಾದುಕೊಂಡಿಹರು ॥ ॥೦೯-೧೯॥

ನಾಳಮಧ್ಯದಲಿಪ್ಪ ಹೃತ್ಕೀಲಾಲಜದೊಳಿಪ್ಪಷ್ಟದಳದಿ ಕು ।
ಲಾಲಚಕ್ರದ ತೆರದಿ ಚರಿಸುವ ಹಂಸನಾಮಕನು ॥
ಕಾಲಕಾಲಗಳಲ್ಲಿ ಯಜ್ಞೇಸಿಪಾಲಕರ ಕೈಸೇವೆಕೊಳುತ ಕೃ ।
ಪಾಳು ಅವರವರಭಿಲಾಷೆಗಳ ಪೂರೈಸಿಕೊಡುತಿಪ್ಪ ॥ ॥೦೯-೨೦॥

ವಾಸವಾನುಜ ರೇಣುಕಾತ್ಮಜ|ದಾಶರಥಿ ವೃಜಿನಾರ್ದನಮಲ ಜ |
ಲಾಶಯಾಲಯ ಹಯವದನ ಶ್ರೀಕಪಿಲ ನರಸಿಂಹ ||
ಈ ಸುರೂಪದಿ ಅವರವರ ಸಂ|ತೋಷಪಡಿಸುತ ನಿತ್ಯಸುಖಮಯ |
ವಾಸವಾಗಿಹ ಹೃತ್ಕಮಲದೊಳು ಬಿಂಬನೆಂದೆನಿಸಿ || ||೦೯-೨೦||

ಸುರಪನಾಲಯಕೈದಿದೊಡೆ ಮನವೆರಗುವುದು ಸತ್ಪುಣ್ಯಮಾರ್ಗದಿ |
ಬರಲು ವಹ್ನಿಯ ಮನೆಗೆ ನಿದ್ರಾಲಸ್ಯಹಸಿತೃಷೆಯು ||
ತರಣಿತನಯನಿಕೇತನದಿ ಸಂ|ಭರಿತ ಕೋಪಾಟೋಪ ತೋರುವು |
ದುರವಿದೂರನು ನಿರುಋತಿಯಲಿ ಬರೆ ಪಾಪಗಳ ಮಾಳ್ಪ || ||೦೯-೨೧||

ವರುಣನಲ್ಲಿ ವಿನೋದಹಾಸ್ಯವು|ಮರುತನೊಳು ಗಮನಾಗಮನ ಹಿಮ |
ಕರ ಧನಾಧಿಪರಲ್ಲಿ ಧರ್ಮದ ಬುದ್ಧಿ ಜನಿಸುವುದು ||
ಹರನ ಮಂದಿರದಲ್ಲಿ ಗೋ ಧನ|ಧರಣಿ ಕನ್ಯಾದಾನಗಳು ಒಂ |
ದರಘಳಿಗೇ ತಡೆಯದಲೆ ಕೊಡುತಿಹ ಚಿತ್ತವುಟ್ಟುವುದು || ||೦೯-೨೨||

ಹೃದಯದೊಳಗೆ ವಿರಕ್ತಿ ಕೇಸರ|ಕೊಡಗೆ ಸ್ವಪ್ನ ಸುಷುಪ್ತಿಲಿಂಗದಿ |
ಮಧುಹ ಕರ್ಣಿಕೆಯಲಿ ಬರೆ ಜಾಗ್ರತೆಯು ಪುಟ್ಟುವುದು ||
ಸುದರುಶನ ಮೊದಲಾದ ಅಷ್ಟಾ|ಯುಧವ ಪಿಡಿದು ದಿಶಾಧಿಪತಿಗಳ |
ಸದನದಲಿ ಸಂಚರಿಸುತೀಪರಿ ಬುದ್ಧಿಗಳ ಕೊಡುವ || ||೦೯-೨೩||

ಸೂತ್ರನಾಮಕ ಪ್ರಾಣಪತಿ ಗಾ|ಯತ್ರಿ ಸಂಪ್ರತಿಪಾದ್ಯನಾಗೀ |
ಗಾತ್ರದೊಳು ನೆಲೆಸಿರಲು ತಿಳಿಯದೆ ಕಂಡಕಂಡಲ್ಲಿ ||
ಧಾತ್ರಿಯೊಳು ಸಂಚರಿಸಿ ಪುತ್ರ ಕಳತ್ರ ಸಹಿತನುದಿನದಿ ತೀರ್ಥ |
ಕ್ಷೇತ್ರಯಾತ್ರೆಯ ಮಾಡಿದೆವು ಎಂದೆನುತ ಹಿಗ್ಗುವರು || ||೦೯-೨೪||

ನಾರಸಿಂಹ ಸ್ವರೂಪದೊಳಗೆ ಶರೀರನಾಮದಿ ಕರೆಸುವನು ಹದಿ |
ನಾರು ಕಳೆಗಳುಳ್ಳ ಲಿಂಗದಿ ಪುರುಷನಾಮಕನು ||
ತೋರುವನು ಅನಿರುದ್ಧದೊಳು ಶಾಂ|ತೀರಮಣನನಿರುದ್ಧರೂಪದಿ |
ಪ್ರೇರಿಸುವ ಪ್ರದ್ಯುಮ್ನ ಸ್ಥೂಲಕಳೇವರದೊಳಿದ್ದು || ||೦೯-೨೫||

ಮೊದಲು ತ್ವಕ್ಚರ್ಮಗಳು ಮಾಂಸವು|ರುಧಿರ ಮೇದೋ ಮಜ್ಜವಸ್ಥಿಗ |
ಳಿವರೊಳಗೆ ಏಕೋನಪಂಚಾಶನ್ಮರುದ್ಗಣವು ||
ನಿಧನಹೀನ್ನಾರಾದಿ ನಾಮಗ | ಅದರ ನಾಮದಿ ಕರೆಸುತೊಂಬ |
ತ್ತಧಿಕನಾಲ್ವತ್ತೆನಿಪ ರೂಪದಿ ಧಾತುಗಳೊಳಿಪ್ಪ || ||೦೯-೨೬||

ಸಪ್ತಧಾತುಗಳೊಳಹೊರಗೆ ಸಂ।ತಪ್ತಲೋಹಗತಾಗ್ನಿಯಂದದಿ ।
ಸಪ್ತನಾಮಗನಿಪ್ಪನನ್ನಮಯಾದಿಕೋಶದೊಳು ॥
ಲಿಪ್ತನಾಗದೆ ತತ್ತದಾಹ್ವಯ । ಕ್ಲುಪ್ತಭೋಗವ ಕೊಡುತ ಸ್ವಪ್ನ ಸು ।
ಷುಪ್ತಿ ಜಾಗ್ರತೇಈವ ತೈಜಸ ಪ್ರಾಜ್ಞ ವಿಶ್ವಾಖ್ಯ ॥ ॥೦೯-೨೮॥

ಶೀಪಿಹೊಂಡಿಹವಲ್ಲಿ ಮಜ್ಜ ಕಳೇವರದಿ ಅಂಗುಲಿಯ ಪರ್ವದ ।
ಠಾವಿನಲಿ ಮುನ್ನೂರಅರವತ್ತೆನಿಪ ಶ್ರಿಸ್ಥಳದಿ ॥
ಸಾವಿರದ ಎಂಭತ್ತು ರೂಪವ । ಕೋವಿದರು ಪೇಳುವರು ದೇಹದಿ ।
ದೇವತೆಗಳೊಡಗೂಡಿ ಕ್ರೀಡಿಸುವನು ರಮಾರಮಣ ॥ ॥೦೯-೨೯॥

ಕೀಟ ಪೇಶಸ್ಕಾರ ನೆನಪಿಲಿ । ಕೀಟಭಾವವ ತೊರೆದು ತದ್ವತ್ ।
ಖೇಟರೂಪವನೈದಿಯಾಡುವ ತೆರದಿ ಭಕುತಿಯಲಿ ॥
ಕೈಟಭಾರಿಯ ಧ್ಯಾನದಿಂದ ಭವಾಟವಿಯನತಿಶೀಘ್ರದಿಂದಲಿ ।
ದಾಟಿ ಸಾರೂಪ್ಯವನು ಐದುವರಲ್ಪಜೀವಿಗಳು ॥ ॥೦೯-೩೦॥

ಈ ಪರಿಯ ದೇಹದೊಳು ಭಗವ।ದ್ರೂಪಗಳ ಮರೆಯದಲೆ ಮನದಿ ಪ ।
ದೇಪದೇ ಭಕುತಿಯಲಿ ಸ್ಮರಿಸುತಲಿಪ್ಪ ಭಕುತರಗೇ ॥
ಗೋಪತಿ ಜಗನ್ನಾಥವಿಠ್ಠಲ ಸ।ಮೀಪಗನು ತಾನಾಗಿ ಸಂತತ ।
ಸಾಪರೋಕ್ಷಿಯ ಮಾಡಿ ಪೊರೆವನು ಎಲ್ಲ ಕಾಲದಲಿ ॥ ॥೦೯-೩೧॥

ooooooooooooooooooooooooooooooooo